# <u>ಕರ್ನಾಟಕ ಲೋಕಾಯುಕ್ತ</u>

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ-2360/2015/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 27/10/2017

## <u>ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ</u>

**ವಿಷಯ:** ಶ್ರೀ ಶೀತಲ ಭೀಮಪ್ಪಾ ಜಕಾತಿ, ಕಬ್ಬೂರು ಅಂಚೆ, ಚಿಕ್ಕೋಡಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

1. ಪ್ರಕರಣದ ದೂರುದಾರರಾದ ಶ್ರೀ ಶೀತಲ ಭೀಮಪ್ಪಾ ಜಕಾತಿ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಕಬ್ಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ರಸ್ತೆಯನ್ನು ಕೆಲವು ವ್ಯಕ್ತಿಗಳು ಅಕ್ರಮವಾಗಿ ಆಕ್ರಮಿಸಿ ವ್ಯಾಪಾರ ಮಳಿಗೆಗಳನ್ನು ನಿರ್ಮಿಸಿರುತ್ತಾರೆ. ಈ ರೀತಿ ಸರ್ವೆ ನಂಬರ್ 1004 ಮತ್ತು 972ರ ಮಧ್ಯದಲ್ಲಿರುವ ಗ್ರಾಮ ಪಂಚಾಯತ್ ರಸ್ತೆಯಲ್ಲಿ ಕಟ್ಟಲಾಗಿರುವ ವ್ಯಾಪಾರಿ ಮಳಿಗೆಗಳನ್ನು ತೆರವುಗೊಳಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಆಧಾರದ ಮೇಲೆ ಎದುರುದಾರರಿಂದ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರು ತಮ್ಮ ಆಕ್ಷಪಣೆಯಲ್ಲಿ ಸ್ಥಾನಿಕ ವಿಚಾರಣೆ ಜರುಗಿಸಿದಾಗ ಕಬ್ಬೂರು ಗ್ರಾಮದ ಸರ್ವೆ ನಂಬರ್ 1004 ಮತ್ತು 972 ಇವುಗಳ ಹದ್ದು ಹಾಗೂ ಚಕಬಂದಿ ಸ್ಪಷ್ಟವಾಗಿ ತಿಳಿದು ಬರುವುದಿಲ್ಲ. ಆದ್ದರಿಂದ, ಸದರಿ ಪ್ರಕರಣದ ಕುರಿತು ಸರ್ವೆ ಇಲಾಖೆಯಿಂದ ನಿಖರವಾದ ವರದಿ ಪಡೆದುಕೊಂಡು ಅತಿಕ್ರಮಣವಾಗಿದಲ್ಲಿ ತೆರವುಗೊಳಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

3. ಉಪವಿಭಾಗಾಧಿಕಾರಿ, ಚಿಕ್ಕೋಡಿ ರವರಿಂದ ದಿನಾಂಕ 05/07/2016ರಲ್ಲಿ ವರದಿ ಸ್ವೀಕೃತವಾಗಿದ್ದು, ಸದರಿ ವರದಿಯಲ್ಲಿ ಕಬ್ಬೂರ ಗ್ರಾಮದ ಗ್ರಾಮ ನಕಾಶೆಯನ್ನು ಹಾಗೂ ತಾಲ್ಲೂಕು ಸರ್ವೆಯರ್ ತಯಾರಿಸಿದ ಪಿ.ಟಿ. ಶೀಟನ್ನು ಪರಿಶೀಲಿಸಲಾಗಿ ಕಬ್ಬೂರ ಗ್ರಾ.ಪಂ. ಸರ್ವೆ ನಂ. 1004 ಮತ್ತು 972ರ ಮಧ್ಯದಲ್ಲಿರುವ ಸರ್ಕಾರಿ ಗ್ರಾ.ಪಂ. ರಸ್ತೆಯನ್ನು (33 ಪೂಟ ಅಗಲ ಮತ್ತು 100 ಮೀಟರ್ ಉದ್ದ)

ಆಕ್ರಮಿಸಿ ವ್ಯಾಪಾರ ಮಳಿಗೆ, ಮನೆಗಳು ಹಾಗೂ ಇನ್ನಿತರೆ ಕಟ್ಟಡಗಳನ್ನು ಕಟ್ಟಿರುವುದು ಕಂಡು ಬಂದ ಕಾರಣ, ಸದರಿ ಅಕ್ರಮವಾಗಿ ಕಟ್ಟಿರುವ ಮಳಿಗೆಗಳನ್ನು ತೆರವುಗೊಳಿಸಲು ಸಂಬಂಧಿಸಿದವರಿಗೆ ನೋಟಿಸ್ ನೀಡಲಾಗಿತ್ತು. ಈ ಕಾರ್ಯಾಲಯದಿಂದ ನೀಡಲಾದ ನೋಟಿಸಿನ ವಿರುದ್ಧ ಶ್ರೀ ಸುರೇಶ್ ಶ್ರೀಪಾಲ ಖೆಮಲಾಪುರೆ ವಗೈರೆ 5 ಜನರು ಚಿಕ್ಕೋಡಿಯ ಪ್ರಧಾನ ದಿವಾಣಿ ನ್ಯಾಯಾಲಯದಲ್ಲಿ ಓ.ಎಸ್ ನಂ. 206/2016 ದಾಖಲಿಸಿರುತ್ತಾರೆ, ಸದರಿ ಪ್ರಕರಣವು ವಿಚಾರಣಾ ಹಂತದಲ್ಲಿದ್ದು, ಕಾರಣ, ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥಗೊಂಡ ನಂತರ ನ್ಯಾಯಾಲಯದ ಆದೇಶದ ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ.

4. ಸದರಿ ಒತ್ತುವರಿ ಜಾಗಕ್ಕೆ ಸಂಬಂಧಿಸಿದಂತೆ, ಸಿವಿಲ್ ನ್ಯಾಯಾಲಯದಲ್ಲಿ ರಿಟ್ ಪೆಟಿಷನ್ ಸಂಖ್ಯೆ: 100158 ರಿಂದ 100163/2017 ಅರ್ಜಿಗಳು ಪೆಂಡಿಂಗ್ ಇರುವುದು ಕಂಡು ಬರುತ್ತದೆ.

5. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಚಿಕ್ಕೋಡಿ ತಾಲ್ಲೂಕು, ಕಬ್ಬೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ರಸ್ತೆಯನ್ನು ಕೆಲವು ವ್ಯಕ್ತಿಗಳು ಅಕ್ರಮವಾಗಿ ಆಕ್ರಮಿಸಿ ವ್ಯಾಪಾರ ಮಳಿಗೆಗಳನ್ನು ನಿರ್ಮಿಸಿದ್ದು, ಈ ರೀತಿ ಸರ್ವೇ ನಂಬರ್ 1004 ಮತ್ತು 972ರ ಮಧ್ಯದಲ್ಲಿರುವ ಗ್ರಾಮ ಪಂಚಾಯತ್ ರಸ್ತೆಯಲ್ಲಿ ಕಟ್ಟಲಾಗಿರುವ ವ್ಯಾಪಾರಿ ಮಳಿಗೆಗಳನ್ನು ತೆರವುಗೊಳಿಸುವ ಕುರಿತು ಹಾಲಿ ಪೆಂಡಿಂಗ್ ಇರುವ ದಾವೆ ಓ.ಎಸ್ ನಂಬರ್:206/2016 ಹಾಗೂ ರಿಟ್ ಪೆಟಿಷನ್ ಸಂಖ್ಯೆ:100158 ರಿಂದ 100163/2017 ಅರ್ಜಿಗಳಲ್ಲಿ ಸಂಬಂಧಪಟ್ಟ ನ್ಯಾಯಾಲಯದ ಆದೇಶದ ರೀತ್ಯಾ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand
27/10.

**(ನ್ಯಾಯಮೂರ್ತಿ ಎನ್. ಆನಂದ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**